**ಕೌನ್ಸಿಲಿಂಗ್‌ಗೆ ಹಾಜರಾಗುವ ಅಭ್ಯರ್ಥಿಗಳಿಗೆ ವಿಶೇಷ ಸೂಚನೆಗಳು :-**

1. ಕೌನ್ಸಲಿಂಗ್‌ಗೆ ಕಡ್ಡಾಯವಾಗಿ ಅಭ್ಯರ್ಥಿಯೆ ಹಾಜರಾಗತಕ್ಕದ್ದು, ಒಂದು ವೇಳೆ ಕೌನ್ಸಲಿಂಗ್‌ಗೆ ಅಭ್ಯರ್ಥಿಯು ಖುದ್ದಾಗಿ ಹಾಜರಾಗಲು ಸಾಧ್ಯವಾಗದ ಪಕ್ಷದಲ್ಲಿ ಅಭ್ಯರ್ಥಿಯ ಪರವಾಗಿ (ತಂದೆ/ತಾಯಿ/ಅಕ್ಕ/ತಂಗಿ/ಅಣ್ಣ/ತಮ್ಮ/ಗಂಡ/ಹೆಂಡತಿ ಮಾತ್ರ ಅವಕಾಶ) ಯಾರಾದರೂ ಒಬ್ಬರು ಅಭ್ಯರ್ಥಿಯ ಭಾವಚಿತ್ರ ಮತ್ತು ಸಹಿಯನ್ನೊಳಗೊಂಡ ನಿಗಧಿತ ನಮೂನೆಯಲ್ಲಿ ಅಧಿಕಾರ ಪತ್ರದೊಂದಿಗೆ ಹಾಜರಾಗತಕ್ಕದ್ದು, Authorization letter (ನಿಗಧಿತ ನಮೂನೆಯನ್ನು ಇಲಾಖೆಯ (raithmitra.kar.nic.in) ವೆಬ್‌ಸೈಟಿನಲ್ಲಿ ಡೌನ್ ಲೋಡ್ ಮಾಡಿಕೊಳ್ಳುವುದು) ಪಡೆದಂತವರಿಗೆ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು. ಅಭ್ಯರ್ಥಿಯ ಪರವಾಗಿ ಹಾಜರಾಗುವವರು ಗುರುತಿನ ಚೀಟಿಯನ್ನು ತರತಕ್ಕದ್ದು, ಮೇಲಿನ ಸೂಚನೆಯು **ವಿಶೇಷ ಪ್ರಕರಣಗಳಿಗೆ ಮಾತ್ರ ಅನ್ವಯಿಸುತ್ತದೆ.**
2. ಕೌನ್ಸಲಿಂಗ್ ನಡೆಯುವ ದಿನದಂದು ನಿಗದಿತ ಸಮಯಕ್ಕೆ ಅರ್ಧ ಗಂಟೆ ಮುಂಚಿತವಾಗಿ ಹಾಜರಾಗುವುದು.
3. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ದಾಖಲಾತಿ ಪರಿಶೀಲಿಸಿದ ನಂತರ ನೀಡಿರುವ ದೃಢೀಕರಣ ಪತ್ರದ ಮೂಲ ಪ್ರತಿ ಮತ್ತು ಸ್ವಯಂ ದೃಢೀಕೃತ ನಕಲು ಪ್ರತಿಯನ್ನು ಕೌನ್ಸಲಿಂಗ್ ನಡೆಯುವ ದಿನದಂದು ಕಡ್ಡಾಯವಾಗಿ ತರತಕ್ಕದ್ದು.
4. ಕೌನ್ಸಿಲಿಂಗ್ ಶೆಡ್ಯೂಲ್ ಮತ್ತು ಖಾಲಿಹುದ್ದೆಯ ಮಾಹಿತಿಯನ್ನು ಇಲಾಖಾ ವೈಬ್‌ಸೈಟ್‌ನಲ್ಲಿ (raithmitra.kar.nic.in) ಪ್ರಕಟಿಸಲಾಗಿರುತ್ತದೆ. ಖಾಲಿ ಹುದ್ದೆಯ ಮಾಹಿತಿಯ ಮುದ್ರಣ(Print out)ವನ್ನು ಕೌನ್ಸಲಿಂಗ್‌ಗೆ ಹಾಜರಾಗುವ ಸಮಯದಲ್ಲಿ ಕಡ್ಡಾಯವಾಗಿ ತರತಕ್ಕದ್ದು ಹಾಗೂ ತಮಗೆ ಸೂಕ್ತವಾದ ಖಾಲಿ ಹುದ್ದೆಗಳನ್ನು ಕೌನ್ಸಿಲಿಂಗ್‌ಗೆ ಬರುವ ಮುಂಚಿತವಾಗಿಯೇ ನಿರ್ಧರಿಸತಕ್ಕದ್ದು.
5. ಕೌನ್ಸಲಿಂಗ್‌ನಲ್ಲಿ ಅಭ್ಯರ್ಥಿ/ಅಭ್ಯರ್ಥಿಯ ಪರವಾಗಿ ಅಧಿಕಾರ ಪತ್ರ ಪಡೆದವರು ತಾವೇ ಸ್ವಇಚ್ಛೆಯಿಂದ ಆಯ್ಕೆ ಮಾಡಿ ದೃಢೀಕರಿಸಿದ ನಂತರ ಆ ಸ್ಥಳವನ್ನು ಯಾವುದೇ ಕಾರಣಕ್ಕೂ ಬದಲಾಯಿಸಲು ಅವಕಾಶವಿರುವುದಿಲ್ಲ. ಆಯ್ಕೆ ಮಾಡಿದ ಸ್ಥಳದ ಬಗ್ಗೆ ಅಭ್ಯರ್ಥಿಯು ಒಪ್ಪಿಗೆ ಪತ್ರ ನೀಡಬೇಕಾಗುತ್ತದೆ.
6. ಕೌನ್ಸಲಿಂಗ್‌ನ್ನು ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳ ಜೇಷ್ಠತೆಯನುಸಾರ (ranking wise) ನಡೆಸಲಾಗುವುದು ಮೊದಲು ಆಯಾ ವೃಂದಗಳಲ್ಲಿನ ಹೈದ್ರಾಬಾದ್-ಕರ್ನಾಟಕ ವ್ಯಾಪ್ತಿಯ ಅಭ್ಯರ್ಥಿಗಳ ಸ್ಥಳ ಆಯ್ಕೆ ನಡೆಸಲಾಗುತ್ತದೆ. ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯ ಅಭ್ಯರ್ಥಿಗಳು ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಉಳಿಕೆ ಮೂಲ ವೃಂದದ ಅಭ್ಯರ್ಥಿಗಳು ಇತರೆ ಖಾಲಿ ಹುದ್ದೆಗಳ ಜೊತೆಗೆ ಹೈದ್ರಾಬಾದ್-ಕರ್ನಾಟಕ ವ್ಯಾಪ್ತಿಯ ಅಭ್ಯರ್ಥಿಗಳು ಆಯ್ಕೆ ಮಾಡಿ ಉಳಿದಿರುವ ಹೈದ್ರಾಬಾದ್-ಕರ್ನಾಟಕ ವ್ಯಾಪ್ತಿಯಲ್ಲಿನ ಖಾಲಿ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ.
7. ಕೌನ್ಸಲಿಂಗ್ ನಡೆಯುವ ದಿನಾಂಕವನ್ನು ಅಭ್ಯರ್ಥಿಯ ಕೋರಿಕೆಯ ಮೇರೆಗೆ ಯಾವುದೇ ಕಾರಣಕ್ಕೂ ಬದಲಾಯಿಸುವುದಿಲ್ಲ ಮತ್ತು ಸದರಿ ದಿನಾಂಕದಂದು ಗೈರು ಹಾಜರಾದಲ್ಲಿ ಮತ್ತೆ ಕೌನ್ಸಲಿಂಗ್‌ಗೆ ಅವಕಾಶ ಕೊಡುವುದಿಲ್ಲ. ಹಾಜರಾದ ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡು ಉಳಿದಿರುವ ಸ್ಥಳಗಳಿಗೆ ಕೌನ್ಸಲಿಂಗ್‌ನ ಕೊನೆಯ ದಿನದಂದು ರ್‍ಯಾಂಡಂ(Random)ಆಗಿ ಗೈರುಹಾಜರಾದ ಅಭ್ಯರ್ಥಿಗಳಿಗೆ ಇಲಾಖಾವತಿಯಿಂದ ಸ್ಥಳ ನಿಯುಕ್ತಿಗೊಳಿಸಲಾಗುವುದು.
8. ಒಂದುವೇಳೆ ಕೌನ್ಸಲಿಂಗ್‌ನ ದಿನಾಂಕ ಮತ್ತು ಸಮಯ ಬದಲಾವಣೆಯಾದಲ್ಲಿ ಇಲಾಖಾ ವೈಬ್‌ಸೈಟ್‌ನಲ್ಲಿ (raithmitra.kar.nic.in) ದಿನಾಂಕ ಮತ್ತು ಸಮಯವನ್ನು ತಿಳಿಸಲಾಗುವುದು. ನಿಗಧಿಪಡಿಸಿದ ದಿನಾಂಕದಂದು ಕಾರಣಾಂತರದಿಂದ ರಜೆ ಘೋಷಣೆಯಾದಲ್ಲಿ ಆ ದಿನ ಕೌನ್ಸಿಲಿಂಗ್ ರದ್ದುಪಡಿಸಿ, ನಂತರ ಇಲಾಖಾ ವೆಬ್ ಸೈಟಿನಲ್ಲಿ ದಿನಾಂಕ ಮತ್ತು ಸಮಯವನ್ನು ತಿಳಿಸಲಾಗುವುದು. ಆದ್ದರಿಂದ ಅಭ್ಯರ್ಥಿಗಳು

ನಿಗದಿಪಡಿಸಿದ ದಿನಾಂಕ ಮತ್ತು ಸಮಯವನ್ನು ಕೌನ್ಸಿಲಿಂಗ್‌ಗೆ ಹಾಜರಾಗುವ ಒಂದು ದಿನ ಮುಂಚಿತವಾಗಿ ವೆಬ್‌ಸೈಟಿನಲ್ಲಿ ಖಾತರಿಪಡಿಸಿಕೊಂಡು ಹಾಜರಾಗುವುದು.

9. ಈ ಸಂಬಂಧ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಪ್ರಯಾಣಭತ್ಯೆ/ದಿನಭತ್ಯೆಯನ್ನು ನೀಡಲಾಗುವುದಿಲ್ಲವೆಂದು ತಿಳಿಸಲಾಗಿದೆ.